# ಕರ್ನಾಟಕ ಸರ್ಕಾರ

ಸಂಖ್ಯೆ: **ಎಫ್‌ಇಇ 80 ಎಫ್‌ಎಲ್‌ಎಲ್ 2021(ಇ)**

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:**23-07-2025.**

**ಇವರಿಂದ:**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು-560001.

**ಇವರಿಗೆ:**
**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಅರಣ್ಯ ಪಡೆ ಮುಖ್ಯಸ್ಥರು),**
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-560003.

**ಮಾನ್ಯರೆ,**

**ವಿಷಯ:** Diversion of 4.966 hectare of forest land in Holtenkatte & 8 Villages in Shikaripura, Sagara and Soraba Taluk, Shivamogga District (Sagar Forest Division) for construction of Rising Main, Gravity Feeder and Delivery Chamber in favour of Executive Engineer, Dandavathi Reservoir Project Division, KNNL, Shikaripura.
**Proposal No: FP/KA/IRRIG/142337/2021**

**ಉಲ್ಲೇಖ:** (1) ಕೇಂದ್ರ ಸರ್ಕಾರದ EDS ದಿನಾಂಕ:16.12.2021.
(2) ತಮ್ಮ ಕಚೇರಿಯ ಪತ್ರ ದಿನಾಂಕ: 01.07.2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(1)ರಲ್ಲಿ ಕೇಂದ್ರ ಸರ್ಕಾರವು ಕೋರಿರುವ EDS ಸಂಬಂಧಪಟ್ಟಂತೆ, ಉಲ್ಲೇಖಿತ(2)ರ ಪತ್ರದಲ್ಲಿ ತಾವು ಒದಗಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಪರಿಹಾರತ್ಮಕ ಅರಣ್ಯೀಕರಣಕ್ಕಾಗಿ ಈ ಹಿಂದೆ ಶಿವಮೊಗ್ಗ ಜಿಲ್ಲೆಯ ಶಿಕಾರಿ ಪುರ ತಾಲ್ಲೂಕು ಕಸಬಾ ಹೋಬಳಿ ಹರಿಹರಪುರ ಗ್ರಾಮದ ಸರ್ವೆ ನಂ. 63 ರಲ್ಲಿ 5.10 ಹೆ. ಮತ್ತು ಸರ್ವೆ ನಂ.65ರಲ್ಲಿ 1.43 ಹೆ. ವಿಸ್ತೀರ್ಣದ ಜಮೀನ್ನು ಒದಗಿಸಲಾಯಿತು. ಈ ಜಮೀನು ಅರಣ್ಯವೇ ಅಥವಾ ಇಲ್ಲವೇ ಎಂಬ ಬಗ್ಗೆ ಸಕ್ಷಮ ಪ್ರಾಧಿಕಾರಗಳಾದ ಕಂದಾಯ ಹಾಗೂ ಅರಣ್ಯ ಇಲಾಖೆಗಳ ಅಧಿಕೃತ ದಾಖಲೆಗಳೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆಯೂ, ಒಂದು ವೇಳೆ ಸದರಿ ಜಮೀನುಗಳು ಅರಣ್ಯ ಪ್ರದೇಶವಾಗದ್ದಿದ್ದಲ್ಲಿ ಸಮರ್ಥನೀಯ ದಾಖಲೆಗಳೊಂದಿಗೆ ಇದೇ ಜಮೀನನ್ನು ಪರಿಹಾರತ್ಮಕ ಅರಣ್ಯೀಕರಣಕ್ಕೆ ಒದಗಿಸಿರುವ ಜಮೀನ್ನು ಪರಿಗಣಿಸುವಂತೆ ಪ್ರಸ್ತಾಪಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಹಾಗೂ ಒಂದು ವೇಳೆ ಸದರಿ ಜಮೀನು ಅರಣ್ಯ ಜಮೀನಾಗಿದ್ದಲ್ಲಿ ಪರಿಹಾರತ್ಮಕ ಅರಣ್ಯೀಕರಣಕ್ಕಾಗಿ ಪರ್ಯಾಯವಾಗಿ ಬೇರೆ ಅರಣ್ಯವಲ್ಲದ ಜಮೀನನ್ನು ಒದಗಿಸುವಂತೆ ಮತ್ತು ಪರಿಹಾರತ್ಮಕ ಅರಣ್ಯೀಕರಣಕ್ಕೆ ಒದಗಿಸಿರುವ ಅರಣ್ಯವಲ್ಲದ ಜಮೀನು ಹಾಗೂ ಅರಣ್ಯ ತಿರುವಳಿಗೆ ಪ್ರಸ್ತಾಪಿಸಿರುವ ಜಮೀನಿನಲ್ಲಿ ಯಾವುದೇ ರೀತಿಯ ಒತ್ತುವರಿ ಇಲ್ಲದಿರುವ ಬಗ್ಗೆ ಸ್ಪಷ್ಟವಾಗಿ FRA ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿ ಶಿವಮೊಗ್ಗ ಇವರಿಂದ ಪಡೆದು ಒದಗಿಸುವಂತೆ ಈ ಮೂಲಕ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

**(ಬಿ.ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
(ಅರಣ್ಯ-ಸಿ ಮತ್ತು ಸಮನ್ವಯ)

Issue: 24/7/25
Dated: 12:10 p.m.

**ಪ್ರತಿ**: The Executive Engineer, Dandavathi Reservoir Project Division, Karnataka Neeravari Nigama Limited, Shikaripur- 577427.